ತಮಾಷೆಯ ಸಾಮಾನ್ಯ ವಿಚಾರವಾಗಿ ಕಾಣಬಹುದು. ಅದರ ಪ್ರಸ್ತುತಿ ಸಭ್ಯವಾಗಿಲ್ಲ ಎಂದೂ ಕೆಲವೊಮ್ಮೆ ಅನಿಸಬಹುದು. ಆದರೆ ಐಹಿಕ ಸಂಪತ್ತನ್ನು ಕೂಡಿಹಾಕುವ ಆ ಮಹಿಳೆಯು, ಕಳೆದುಹೋದ ವಜ್ರದ ನತ್ತನ್ನು ಹೊರಗೆಲ್ಲಾ ಹುಡುಕುತ್ತ, ಹುಡುಕುತ್ತ... ಕೊನೆಗೆ ನಿಜವಾಗಿಯೂ ಮೌಲ್ಯಯುತವಾದ್ದು ತನ್ನ ಅಂತರಂಗದಲ್ಲಿ ಅಡಗಿದೆ ಎಂಬುದನ್ನು ಮನಗಾಣುತ್ತಾಳೆ. ಐಹಿಕ ಭೋಗಗಳ ಬೆಂಬತ್ತಿ, ಅಂತರಂಗದ ಆನಂದವನ್ನು ಕಂಡುಕೊಳ್ಳುವುದನ್ನೇ ಮರೆತೆನಲ್ಲ ಎಂದು ಬೇಸರಿಸಿಕೊಳ್ಳುತ್ತಾಳೆ. ಇದು ಭಕ್ತಿಪಂಥದ ಒಂದು ಆಯಾಮವೂ ಹೌದು. ಎಂಟನೇ ಶತಮಾನದಲ್ಲಿ ಕೇರಳದಲ್ಲಿ ವ್ಯಾಪಕವಾಗಿದ್ದ ಆಧ್ಯಾತ್ಮಿಕ ಚಿಂತನೆಯು ಅಂತರಂಗ ಶುದ್ಧಿಯ ಬಗ್ಗೆ ಹೇಳುತ್ತದೆ. ತುಂಜತ್ತ್ ಎಳುತ್ತಚ್ಛನ್ ಇದೇ ಭಕ್ತಿ ತತ್ತ್ವವನ್ನಾಧರಿಸಿ ಬರೆದ 'ಅಧ್ಯಾತ್ಮ ರಾಮಾಯಣ' ಮಲಯಾಳದ ಮೊದಲ ಕೃತಿ. ಅಂದಮೇಲೆ ಚೇರ ರಾಜರಾಳ್ವಿಕೆ ಸಂದರ್ಭದಲ್ಲಿ ಈ ಎಲ್ಲ ಅಂಶಗಳು ಕಲಾವಿದರ ಮೇಲೆ ಪ್ರಭಾವ ಬೀರಿರುವ ಸಾಧ್ಯತೆ ಇದೆ. ಅಂತಿಮವಾಗಿ ಅವುಗಳ ಅಭಿವ್ಯಕ್ತಿಯ ಏರುತಗ್ಗುಗಳು ಕಲಾವಿದರನ್ನೇ ಅವಲಂಬಿಸಿರುತ್ತದೆ. ಇದರೊಂದಿಗೆ ಪ್ರಸ್ತುತಪಡಿಸುವ 'ಪೊಲಿ' ನೃತ್ಯವು ದೇವಿಯ ಆಶೀರ್ವಾದ ಬೇಡುವ ನೃತ್ಯವಾಗಿದೆ. ತನ್ನನ್ನು ತಾನು ಕಾಳಿ, ನೀಲಿ ಮತ್ತು ಭದ್ರಾದೇವಿಯರಿಗೆ ಅರ್ಪಿಸಿಕೊಳ್ಳುವ ಕಲಾವಿದೆಯು ಲೋಕಕಲ್ಯಾಣ ಮಾಡುವಂತೆ ಬೇಡಿಕೊಳ್ಳುತ್ತಾಳೆ. ಅಂದಹಾಗೆ, ಸಂಸ್ಕೃತದಲ್ಲಿ ಭಗವತಿ, ಲಕ್ಷ್ಮಿ, ಸರಸ್ವತಿ ಹೆಸರಿನ ದೇವಿಯರು ಜನಪದರಲ್ಲಿ ಕಾಳಿ, ನೀಲಿ ಮತ್ತು ಭದ್ರಾ ದೇವಿಯರಾಗಿದ್ದಾರೆ.

ದೇಸಿ ನೃತ್ಯ ಶೈಲಿಯು ನನಗೆ ನೃತ್ಯದ ಮೂಲ ರೂಪವನ್ನು ಪರಿಚಯಿಸಿತು. 'ಮೂಲ' ಎಂಬುದೇ ಒಂದು ರೀತಿಯಲ್ಲಿ ಚರ್ಚಾರ್ಹ. ಯಾಕೆಂದರೆ, ನೃತ್ಯವು ಸದಾ ವಿಕಾಸ ಹೊಂದುತ್ತಲೇ ಇರುವ ಕಲಾಪ್ರಕಾರ. ಹಾಗೆ ಆಗುತ್ತಲೇ ಇರಬೇಕು ಕೂಡ. ಆದರೆ ಈ ವಿಕಾಸದ ಹಾದಿಯಲ್ಲಿ ಕಲೆ ತನ್ನ ಅಸ್ತಿತ್ವದ ರೂಪುರೇಷೆಗಳನ್ನು ಬಿಟ್ಟು ಕೊಡಬಾರದು. ಸ್ವಾತಿ ತಿರುನಾಳ್ ಅವರ ನಂತರದ ಕಾಲದಲ್ಲಿ 'ಮೋಹಿನಿಯಾಟ್ಟಂ' ಎಂದರೆ ಅದು ಭರತನಾಟ್ಯದ ಒಂದು ಸಹೋದರ ಕಲೆಯೆಂಬಂತೆ ಬಿಂಬಿಸಲಾಯಿತು. ಭರತನಾಟ್ಯದಂತೆ ಅದಕ್ಕೆ ಬಹಳ ದೀರ್ಘ ಕಾಲದ ಹಿನ್ನೆಲೆ, ಇತಿಹಾಸವಿಲ್ಲ ಎಂಬ ತಪ್ಪು ಕಲ್ಪನೆ ಕೂಡ ಮೂಡಿತು. ಮೋಹಿನಿಯಾಟ್ಟಂ ನೃತ್ಯವು ಸ್ತ್ರೀ ಸಂಪ್ರದಾಯದ ಲಾಸ್ಯ ಪ್ರಧಾನವಾದ ನೃತ್ಯ. ಚೇರ, ಚೋಳ, ಪಾಂಡ್ಯ ಪ್ರದೇಶವನ್ನೊಳಗೊಂಡ ತಮಿಳುರಾಜ್ಯದ ಅಂದಿನ ಭಾಗವಾದ ಚೇರ ಪ್ರದೇಶದಲ್ಲಿ ಇದು ವಿಕಾಸ ಹೊಂದಿತು. ಆದ್ದರಿಂದ ಮೋಹಿನಿಯಾಟ್ಟಂನ ನೃತ್ತ ಮತ್ತು ಅಭಿನಯ ವಿಚಾರಗಳು ಕೇರಳೀಯ ಸಂಸ್ಕೃತಿಯ ಪ್ರಭಾವ ಹೊಂದಿವೆ.

**◆ ನೀವು ಈ ನೃತ್ಯವನ್ನು ಕಲಿತ ಮತ್ತು ಅದನ್ನು ಪರಿಷ್ಕರಿಸಿದ ಅನುಭವಗಳನ್ನು ಹಂಚಿಕೊಳ್ಳಬಹುದಾ?**

ನಾನು ಗುರು ಕಲಾಮಂಡಲಂ ಕಲ್ಯಾಣಿ ಕುಟ್ಟಿಯಮ್ಮ ಅವರಿಂದ ಈ ಕಲೆಯನ್ನು ಕಲಿತೆ. ಅವರೊಬ್ಬರು ಶ್ರೇಷ್ಠ ಕಲಾವಿದರು. ನೃತ್ಯ ಪ್ರಕಾರದ ಸಮಗ್ರ ತಿಳಿವಳಿಕೆ ಅವರಿಗಿದ್ದುದರಿಂದ ನನಗೆ ಹೀಗೆ ಹೆಚ್ಚಿನ ಅಭ್ಯಾಸ ಮಾಡಲು ಪ್ರೇರಣೆ ದೊರೆಯಿತು. ಕಲ್ಯಾಣಿ ಕುಟ್ಟಿಯಮ್ಮ ಅವರದೇ ಶೈಲಿಯಲ್ಲಿ ನಾನು ನನ್ನ ನಾಟ್ಯಶಾಲೆ – ನಟನ ಕೈರಳಿ ಮತ್ತು ನಟನ ಕೈಶಿಕಿಯಲ್ಲಿ ಕಲಿಸುತ್ತೇನೆ. ನನ್ನ ಅಧ್ಯಯನವನ್ನು ಆಧರಿಸಿ ಹಲವಾರು ಮಾರ್ಪಾಟುಗಳನ್ನು ಮಾಡಿದ್ದೇನೆ. ಕಣ್ಣಿನ ಚಲನೆ ಮತ್ತು ಹಸ್ತಾಭಿನಯವನ್ನು ಇನ್ನಷ್ಟು ವಿಸ್ತರಿಸಿಕೊಂಡು, ವಿದ್ಯಾರ್ಥಿನಿಯರಿಗೆ ಪಾಠ ಮಾಡುತ್ತೇನೆ. ಹೆಚ್ಚಿನ ಕಲೆಗಳು ನಾಟ್ಯಶಾಸ್ತ್ರವನ್ನು ಆಧರಿಸಿಯೇ ಮುನ್ನಡೆಯುತ್ತವೆ. ಇಲ್ಲಿಯೂ ನಾಟ್ಯಶಾಸ್ತ್ರದ ಪ್ರಭಾವ ಇದೆಯಾದರೂ, ಕೆಲವು ಅನುಸರಣೆಗಳು ಭಿನ್ನವಾಗಿವೆ. ರಂಗದ ಮೇಲೆ ಸಾವಿನ ಅಭಿನಯವನ್ನು ಇಲ್ಲಿ ನಿಷೇಧಿಸಲಾಗಿದೆ. ಆದರೆ ಕೂಡಿಯಾಟ್ಟಂ ಮತ್ತು ಕಥಕಳಿಯಲ್ಲಿ ಇದು ವಿವರವಾಗಿ ಪ್ರಸ್ತುತಗೊಳ್ಳುತ್ತದೆ. ರಕ್ತಸಿಕ್ತ ಪಾತ್ರಾಭಿನಯ ಕೂಡ ಇಲ್ಲಿ ಹೆಚ್ಚು ಬಳಕೆಯಿಲ್ಲ. ಈ ರೂಢಿಯನ್ನು ಗಮನಿಸಿಕೊಂಡೇ ನನ್ನ ಅಧ್ಯಯನವನ್ನು ಕೇಂದ್ರೀಕರಿಸಿ ಮುಂದುವರೆದಾಗ, ಇದು ಸ್ತ್ರೀ ಕೇಂದ್ರಿತ ಲಾಸ್ಯಪ್ರಧಾನ ಕಲೆಯಾಗಿ ಬೆಳೆದು ಬಂದುದನ್ನು ಗುರುತಿಸಿಕೊಂಡೆ.

ನೃತ್ಯಪಟುಗಳು ಎಷ್ಟು ಬದ್ಧತೆಯಿಂದಿರುತ್ತಾರೆಂದರೆ, ಕಣ್ಣಿನಷ್ಟೇ ಇಡೀ ದೇಹವನ್ನು ಅಭಿವ್ಯಕ್ತಿಯ